ಭ್ರೂಣವಾಗುತ್ತದೆ. ವೀರ್ಯ ಮತ್ತು ಅಂಡದ ಮಿಲನ ಕ್ರಿಯೆ ಯಶಸ್ವಿಯಾದರೆ 2ರಿಂದ 6 ದಿನಗಳ ಒಳಗೆ ಭ್ರೂಣ ರೂಪುಗೊಳ್ಳುತ್ತದೆ. ಗರ್ಭಧಾರಣೆ ಮಾಡಲು ತಾಯಿಯ ಅಥವಾ ಮಗುವನ್ನು ಹೆರಲು ಆಯ್ಕೆ ಮಾಡಿದ ಹೆಣ್ಣಿನ ಗರ್ಭಾಶಯಕ್ಕೆ ದ್ರವರೂಪದ ಭ್ರೂಣವನ್ನು ವರ್ಗಾಯಿಸಲಾಗುತ್ತದೆ. ಈ ವಿಧಾನದಲ್ಲಿ ಮಗು ಸೃಷ್ಟಿಸುವುದನ್ನು 'ಟೆಸ್ಟ್ ಟ್ಯೂಬ್ ಬೇಬಿ' (ಪ್ರನಾಳ ಶಿಶು) ಎನ್ನಲಾಗುವುದು. ಬಂಜೆತನಕ್ಕೆ ಸಿದ್ಧ ಪರಿಹಾರದಂತೆ ಈ ವಿಧಾನವನ್ನು ಬಳಸಲಾಗುತ್ತದೆ. ಒಂದು ಬಾರಿ ಈ ಪ್ರಯೋಗ ವಿಫಲವಾದರೆ ಎರಡನೇ ಬಾರಿ, ಮೂರನೇ ಬಾರಿ, ಹೀಗೆ ಗರ್ಭಧಾರಣೆ ಯಶಸ್ವಿಯಾಗುವವರೆಗೆ ಮುಂದುವರೆಯುತ್ತದೆ. ಪ್ರತಿ ಬಾರಿಗೂ ಚಿಕಿತ್ಸೆಯ ದುಬಾರಿ ವೆಚ್ಚ ಭರಿಸಬೇಕಾಗುವುದರಿಂದ ಎರಡು ಮೂರು ಬಾರಿಗೆ ಸೋತು ಕೈ ಚೆಲ್ಲುವವರ ಸಂಖ್ಯೆಗೂ ಕಡಿಮೆಯಿಲ್ಲ. ಹಾಗೆ ಮಹಿಳೆಯ ಆರೋಗ್ಯ ಗಮನದಲ್ಲಿಟ್ಟುಕೊಂಡು ಕೂಡ ಹಲವು ಬಾರಿ ಪ್ರಯೋಗ ಆದ ನಂತರ ಗರ್ಭಧಾರಣೆ ಆಗದೆ ಇದ್ದರೆ ಪ್ರಯತ್ನ ನಿಲ್ಲಿಸಲಾಗುತ್ತದೆ.

### ಸೆಲೆಬ್ರಿಟಿಗಳ ಜೀವನಶೈಲಿಗೆ ಅನುಕೂಲ

ಮುಖ್ಯವಾಗಿ ಸಿನಿಮಾ ತಾರೆಯರು, ನಿರೂಪಕಿಯರು, ಕ್ರೀಡಾಪಟುಗಳು ತಮ್ಮ ವೃತ್ತಿಗೋಸ್ಕರ, ಜೀವನಶೈಲಿಯ ಕಾರಣಕ್ಕಾಗಿ ಮದುವೆಯನ್ನು ಮುಂದೂಡುವುದನ್ನು, ಮದುವೆಯಾದರೂ ಮಗು ಮಾಡಿಕೊಳ್ಳುವ ಯೋಜನೆಯನ್ನು ಮುಂದೂಡುವುದು ಸರ್ವೇ ಸಾಮಾನ್ಯ. ಆದರೆ ವಯಸ್ಸಿನ ಜೊತೆಗೆ ಫಲವಂತಿಕೆ ಚಕ್ರ ಸಹ ನಿಧಾನವಾಗುತ್ತದೆ. ಈ ಕಾರಣಕ್ಕೆ ಅಂಡಾಣು ಬ್ಯಾಂಕ್ ವರದಾನವಾಗಿದೆ. ಪಾಶ್ಚಾತ್ಯ ಮತ್ತು ಮುಂದುವರಿದ ರಾಷ್ಟ್ರಗಳ ನಟೀಮಣಿಯರು ಈ ವಿಧಾನವನ್ನು ಬಳಸುವುದರಲ್ಲಿ ಮುಂಚೂಣಿಯಲ್ಲಿದ್ದಾರೆ.

ಭಾರತಕ್ಕೆ ಬಂದರೆ ಮಾಜಿ ವಿಶ್ವಸುಂದರಿ ಡಯಾನಾ ಹೇಡನ್ 8 ವರ್ಷದ ಹಿಂದೆ 16 ಅಂಡಾಣುಗಳನ್ನು ಸಂರಕ್ಷಣೆ ಮಾಡಿಟ್ಟಿದ್ದು, ತನ್ನ 42ನೇ ವಯಸ್ಸಿನಲ್ಲಿ 2016ರಲ್ಲಿ ಹೆಣ್ಣುಮಗುವಿಗೆ ಜನ್ಮ ನೀಡಿದ್ದಾರೆ. ಸುಕೃತಿ ಕಂಡಪಾಲ್, ಏಕ್ತಾ ಕಪೂರ್, ಮೋನಾ ಸಿಂಗ್, ತನಿಷಾ ಮುಖರ್ಜಿ, ರಾಖಿ ಸಾವಂತ್, ಇನ್ನಿತರ ಬಾಲಿವುಡ್ ನಟಿಯರು ತಮ್ಮ ಅಂಡಾಣುಗಳನ್ನು ಸಂರಕ್ಷಿಸಿಟ್ಟಿದ್ದಾರೆ. ಇದನ್ನು ಬಹಿರಂಗವಾಗಿ ಹೇಳಿಕೊಂಡಿದ್ದಾರೆ ಸಹ. ಇನ್ನು ಅಂಡಾಣುಗಳನ್ನು ಬಳಸಿ ಬಾಡಿಗೆ ತಾಯಿಯಿಂದ ಮಕ್ಕಳನ್ನು ಪಡೆದಿರುವ ಲೈಮ್ ಲೈಟ್ ಮಂದಿಯ ಸಂಖ್ಯೆಯೂ ಕಡಿಮೆಯಿಲ್ಲ.

### ಅಂಡಾಣು ಸಂಶೋಧನೆಯ ದಾರಿ

ಜಪಾನಿನ ಕೃಷಿ ಸಚಿವಾಲಯದಲ್ಲಿ 15 ವರ್ಷ ಪಶುವೈದ್ಯರಾಗಿ ಕೆಲಸ ಮಾಡಿದ ಡಾ. ಕುವಾಯಾಮಾ ಘನೀಕರಿಸುಕೆಯ (ವೆಟ್ರಿಫಿಕೇಷನ್) ಪಿತಾಮಹ ಎಂದೇ



## ಫ್ರೀಜಿಂಗ್ ತಂತ್ರಜ್ಞಾನ- ಅಧ್ಯಯನ

ಈ ಅತ್ಯಾಧುನಿಕ ತಂತ್ರಜ್ಞಾನದ ಬಗ್ಗೆ ಸಾಕಷ್ಟು ಅಧ್ಯಯನಗಳೂ ನಡೆದಿವೆ. ವಿದೇಶಗಳಲ್ಲಿ 'ಎಗ್ ಫ್ರೀಜಿಂಗ್' ತಂತ್ರಜ್ಞಾನದ ಮೂಲಕ ಮಗು ಪಡೆಯಬೇಕಾದರೆ ಮಹಿಳೆ ಕ್ಯಾನ್ಸರ್‌ಪೀಡಿತವಾಗಿದ್ದರೆ ಅಥವಾ ಕ್ಯಾನ್ಸರ್ ಲಕ್ಷಣಗಳು ಕಾಣಿಸಿಕೊಂಡಲ್ಲಿ ಮಾತ್ರ ಅನುಮತಿ ನೀಡಲಾಗಿದೆ. ಆದರೆ ನಮ್ಮ ದೇಶದಲ್ಲಿ ಕ್ಯಾನ್ಸರ್ ಜೊತೆಗೆ ಎಂಡೊಮೆಟ್ರಿಯೋಸಿಸ್‌ನಲ್ಲಿ ತೊಂದರೆ ಕಾಣಿಸಿಕೊಂಡರೆ, ಗಂಡನಿಗೆ ಯಾವುದಾದರೂ ಕಾಯಿಲೆ ಇದ್ದು, ಮುಂದೆ ಸಹಜವಾಗಿ ಮಗು ಪಡೆಯುವುದು ಅಸಾಧ್ಯ ಎಂಬ ಸಂದರ್ಭಗಳಲ್ಲಿ ಎಗ್ ಫ್ರೀಜಿಂಗ್ ಮಾಡಿಕೊಳ್ಳಬಹುದು.

ಅಂಕಿಅಂಶಗಳ ಪ್ರಕಾರ ನಮ್ಮ ದೇಶದಲ್ಲಿ ಶೇ. 2ರಿಂದ 5ರಷ್ಟು ಎಗ್ ಫ್ರೀಜಿಂಗ್ ಪ್ರಕರಣಗಳು ದಾಖಲಾಗಿವೆ. ಈ ವಿಧಾನದಲ್ಲಿ ಮಗು ಪಡೆಯುವುದನ್ನು ವೈದ್ಯರು, ಫಲಾನುಭವಿಗಳಿಬ್ಬರೂ ಗೌಪ್ಯವಾಗಿ ಇಡುವ ಕಾರಣ ಈಗ ನಿಖರ ಅಂಕಿಅಂಶಗಳನ್ನು ಹೇಳಲಾಗದು.

2017ರ ಸಮೀಕ್ಷೆ ಪ್ರಕಾರ ಭಾರತದಲ್ಲಿ 5 ಸಾವಿರಕ್ಕೂ ಹೆಚ್ಚು ಮಕ್ಕಳು ಎಗ್ ಫ್ರೀಜಿಂಗ್ ತಂತ್ರಜ್ಞಾನದಿಂದ ಜನಿಸಿದ್ದಾರೆ. ಹೀಗೆ ಜನಿಸಿದ 900 ಮಕ್ಕಳ ಆರೋಗ್ಯ ಸ್ಥಿತಿಗತಿ ಬಗ್ಗೆ ಅಧ್ಯಯನ ನಡೆಸಿದ್ದು, ಸಾಮಾನ್ಯ ಅಥವಾ ಸಹಜವಾಗಿ ಜನಿಸಿದ ಮಕ್ಕಳಿಗೂ ಈ ಮಕ್ಕಳಿಗೂ ಆರೋಗ್ಯದಲ್ಲಿ ಯಾವುದೇ ತೊಡಕಾಗಿಲ್ಲ. 2014ರ ಅಧ್ಯಯನದ ಪ್ರಕಾರ, ಎಗ್ ಫ್ರೀಜಿಂಗ್ ನಂತರ ಗರ್ಭಿಣಿಯಲ್ಲಿ ಯಾವುದೇ ತೊಂದರೆಯಾಗಿಲ್ಲ ಎಂಬುದು ಸಾಬೀತಾಗಿದೆ.



**ಭಾರತದ ಮಾಜಿ ವಿಶ್ವಸುಂದರಿ ಡಯಾನಾ ಹೇಡನ್ ಎಂಟು ವರ್ಷಗಳ ಹಿಂದೆ 16 ಅಂಡಾಣುಗಳನ್ನು ಸಂರಕ್ಷಣೆ ಮಾಡಿಟ್ಟಿದ್ದು, ತನ್ನ 42ನೇ ವಯಸ್ಸಿನಲ್ಲಿ (2016) ಹೆಣ್ಣುಮಗುವಿಗೆ ಜನ್ಮ ನೀಡಿದ್ದಾರೆ.**